ಓ ಎಸ್ ನಂಬರ 166/2023

ಪಿ.ಡಬ್ಲ್ಯೂ 1

**ದಿನಾಂಕಃ 22.07.2025.**

**ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಸಿ ಪಿ ವಕೀಲರಿಂದಃ

ಸಾಕ್ಷಿ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರು ಆಕ್ಷೇಪಿಸಿದ್ದು ಆಕ್ಷೇಪಣೆಗೆ ಒಳಪಟ್ಟು ಅದನ್ನು ನಿಪಿ 13 ಎಂದು, 2 ಮರಣ ಪತ್ರಗಳನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ 14 ಮತ್ತು 15 ಎಂದು, ನಮೂನೆ 3 ಪುರಸಭೆ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ 16 ಎಂದು, ರೇಶನ್ ಕಾರ್ಡನ್ನು ಹಾಜರುಪಡಿಸಿದ್ದು, ಅದನ್ನು ನಿಶಾನೆ ಪಿ 17 ಎಂದು, ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಸಿ ಎಲ್ ಅವರಿಂದ ಃ

ಈ ದಿನ ನಾನು ಹಾಜರುಪಡಿಸಿದ ದಾಖಲೆ ಟೈಪರೈಟರ್ ಮುದ್ರಿತ ದಾಖಲೆ ಎಂದರೆ ಸಾಕ್ಷಿ ನಾವು ತಿದ್ದು ಪಡಿ ಮಾಡಿದ್ದು ಹೇಳಿದೆವು ಆ ರೀತಿ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಈಗ ಜನನ ಪ್ರಮಾಣ ಪತ್ರ ತೆಗೆಸಿದರೆ ಜನನ ಪ್ರಮಾಣ ಪತ್ರದಲ್ಲಿ ಕ್ಯೂಆರ್ ಕೋಡ್ ಇರುತ್ತದೆ ಎಂದರೆ ಸರಿ. ಕ್ಯೂಆರ್ ಕೋಡ್ ಸ್ಕ್ಯಾನ ಮಾಡಿದರೆ ದಾಖಲೆ ನಿಜ ಇದೆಯೋ ಸುಳ್ಳು ಇದೆಯೋ ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ಅವರೇ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಹೌದು ಎನ್ನುತ್ತಾರೆ. ನೀವು ಹಾಜರುಪಡಿಸಿರುವ ಜನನ ಪ್ರಮಾಣ ಪತ್ರದಲ್ಲಿ ಕ್ಯೂಆರ್ ಕೋಡ್ ಇಲ್ಲ ಎಂದರೆ ಸರಿ. ನೀವು ಹಾಜರುಪಡಿಸಿರುವ ದಾಖಲೆ ಖೊಟ್ಟಿ ದಾಖಲೆಯಾಗಿದ್ದು ಆದ ಕಾರಣ ಕ್ಯೂಆರ್ ಕೋಡ್ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಈಗಿನ ಜನನ ಪ್ರಮಾಣ ಪತ್ರ ನೀಡಲು ತೊಂದರೆ ಇತ್ತ ಎಂದರೆ ಸಾಕ್ಷಿ ಅರ್ಜಿ ನೀಡಿರುತ್ತೇವೆ 1 ವಾರ ಸಮಯ ನೀಡಿರುತ್ತಾರೆ ಎನ್ನುತ್ತಾರೆ. ನಾನು ಅರ್ಜಿ ನೀಡಿದಕ್ಕೆ ಸಂಬಂದಿಸಿದಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸ್ವೀಕೃತಿ ರಶೀದಿಯನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ನಮ್ಮ ತಂದೆಯನ್ನು ಆಸ್ಪತ್ರೆಗೆ ಸೇರಿಸಿದ್ದೆವು ಎನ್ನುತ್ತಾರೆ. ನನ್ನ ತಂದೆಯನ್ನು ಆಸ್ಪತ್ರೆಗೆ ಸೇರಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ನಿಮ್ಮ ಹೆಸರನ್ನು ಮರಣ ಪ್ರಮಾಣ ಪತ್ರದಲ್ಲಿ ಸೇರಿಸಿಕೊಳ್ಳಬೇಕು ಎಂದು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 17 ರಲ್ಲಿ ರಾಜುರವರ ಹೆಸರು ಇರುತ್ತದೆ. ನಿಪಿ 17 ನ್ನು ಮಾಡಿಸಿ 10 ವರ್ಷಗಳಾಗಿರುತ್ತದೆ. ನಿಪಿ 17 ನ್ನು ಮೊದಲು ಹಾಜರುಪಡಿಸಲು ತೊಂದರೆ ಇತ್ತ ಎಂದರೆ ಸಾಕ್ಷಿ ನನಗೆ ಆಗ ಗೊತ್ತಾಗಲಿಲ್ಲ ಎನ್ನುತ್ತಾರೆ. ನಿಪಿ 17 ಈಗಲೂ ಚಾಲ್ತಿಯಲ್ಲಿರುತ್ತದೆ. ಕೇಸಿಗೆ ಅನುಕೂಲವಾಗುವ ಸಲುವಾಗಿ ನಾನು ಖೊಟ್ಟಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ